**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ08-06-2026**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಸಿ ಡಿ ಎಂ ವಕೀಲರಿಂದ**

ನಿ ಪಿ 36 ರಲ್ಲಿ ಕವಿತಾ ಮತ್ತು ಅನಿಲ್ ಎಂದು ಮಾತ್ರ ನಮೂದಾಗಿದ್ದು, ಅನಿಲ್ ಜೆ ಎಂದು ಮತ್ತು ವಿಳಾಸ ನಮೂದಾಗಿಲ್ಲ ಎಂದರೆ ಸರಿ. ನಿ ಪಿ 37 ರ ಆದೇಶ ದಿಃ 10.11.2020ರಲ್ಲಿ ಆಗಿರುತ್ತದೆ ಎಂದರೆ ಸರಿ. ನಿ ಪಿ 37 ರ ಆದೇಶದಂತೆ ನಿ ಪಿ 38 ರಿಂದ 40 ರಂತೆ ಪಹಣಿಗಳು ಮತ್ತು ಮ್ಯೂಟೇಷನ್ ಬಂದಿರುತ್ತದೆ ಎಂದರೆ ಸರಿ. ನಿ ಪಿ 37 ರ ಆದೇಶದ 2 ವರ್ಷಗಳ ಪೂರ್ವದಲ್ಲಿ ಈ ದಾವೆ ಹೂಡಿರುತ್ತೇನೆಂದರೆ ಸರಿ. ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಈ ಪ್ರಕರಣದ ದಾಖಲಾತಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಪ್ರತಿವಾದಿಯವರು ನಾನು ಅನಿಲ್ ಕುಮಾರ ಜೆ ರವರ ಧರ್ಮ ಪತ್ನಿ ಅಲ್ಲ ಎಂದು ತಕರಾರು ಸಲ್ಲಿಸಿದ್ದರು ಎಂದರೆ ಸರಿ.

ಅನಿಲ್ ಕುಮಾರ ಜೆ ರವರು ದಿಃ 27.05.1998 ರಲ್ಲಿ ಪಾರ್ವತಿ ಅಲಿಯಾಸ್ ಪಾವನಾ ರವರನ್ನು ಕಾನೂನು ಬದ್ಧವಾಗಿ ಮದುವೆಯಾಗಿರುತ್ತಾರೆಂದು ಪ್ರತಿವಾದಿಯವರು ಪ್ರತಿವಾದ ಪತ್ರದಲ್ಲಿ ತಿಳಿಸಿರುತ್ತಾರೆಂದರೆ ಅನಿಲ್ ಕುಮಾರ ರವರು ಅವರನ್ನು ಮದುವೆಯಾಗಿರುವುದಿಲ್ಲ ಎಂದು ನುಡಿಯುತ್ತಾರೆ. ನಿ ಪಿ 34 ಮತ್ತು 35 ಪೋಟೋಗಳನ್ನು 2002 ರಲ್ಲಿ ತೆಗೆದಿರುತ್ತೇವೆ. ನನ್ನ ದೊಡ್ಡಮ್ಮ ಮಗಳ ಸಮಯದಲ್ಲಿ ಪೋಟೋಗಳನ್ನು ತೆಗೆದಿರುತ್ತಾರೆ. ಪೋಟೋಗಳನ್ನು ಈ ದಾವೆಗಾಗಿ ಸೃಷ್ಠಿ ಮಾಡಿರುತ್ತೇವೆಂದರೆ ಸರಿಯಲ್ಲ. ನಿ ಪಿ 37 ರಿಂದ 40 ದಾಖಲಾತಿಗಳನ್ನು ಅಧಿಕಾರಿಗಗಳೊಂದಿಗೆ ಶಾಮೀಲಾಗಿ ಸೃಷ್ಠಿ ಮಾಡಿಕೊಂಡಿರುತ್ತೇವೆಂದರೆ ಸರಿಯಲ್ಲ. ಎ ಸಿ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಜಿಲ್ಲಾಧಿಕಾರಿ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆಂದರೆ ಸರಿ. ನಾನು ಜೆ ಅನಿಲ್ ಕುಮಾರ ರವರ ಧರ್ಮಪತ್ನಿ ಎಂದು ತೀರ್ಮಾನ ಮಾಡಲು ಈ ಪ್ರಕರಣದಲ್ಲಿ ಬಾಕಿ ಇರುತ್ತದೆ ಎಂದರೆ ಸರಿ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/–

**ಪ್ರಧಾನ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**